**KARNATAKA NURSING & PARAMEDICAL SCIENCES EDUCATION (REGULATION) AUTHORITY**
**Karnataka State Diploma In Nursing Examination Board**
First Floor, Library Block, BMC&RI Campus, K.R.Road, Bengaluru-560002
**Ph No**: 080-26700074, 26700075 **Email**: ksdneb@gmail.com

ಕ.ರಾ.ಶು.ಪ.ಮಂ/ಸಿಬ್ಬಂದಿ/ 24 / 2021-2022 ದಿನಾಂಕ: 24-12-2021

## ಸುತ್ತೋಲೆ

ವಿಷಯ: ಮೊದಲನೇ ಹಾಗೂ ಎರಡನೇ ವರ್ಷದ ವಾರ್ಷಿಕ ಪರೀಕ್ಷೆಯ ಪರೀಕ್ಷಾ ಅರ್ಜಿಗಳನ್ನು ಸಲ್ಲಿಸಲು ನಿಗಧಿಪಡಿಸಿರುವ ದಿನಾಂಕವನ್ನು ವಿಸ್ತರಿಸುವ ಬಗ್ಗೆ.

*****

ಮೊದಲನೇ ಹಾಗೂ ಎರಡನೇ ವರ್ಷದ ವಾರ್ಷಿಕ ಪರೀಕ್ಷೆಯ ವೇಳಾಪಟ್ಟಿಯನ್ನು ಪರೀಕ್ಷಾ ಮಂಡಳಿಯ ಇದೇ ಪತ್ರ ಸಮ ಸಂಖ್ಯೆಯ ದಿನಾಂಕ 13-12-2021 ರಲ್ಲಿ ಈಗಾಗಲೇ ಪ್ರಕಟಿಸಲಾಗಿರುತ್ತದೆ. ಮೊದಲನೇ ಹಾಗೂ ಎರಡನೇ ವರ್ಷದ ವಾರ್ಷಿಕ ಪರೀಕ್ಷೆಯ ಪರೀಕ್ಷಾ ಅರ್ಜಿಗಳನ್ನು ಸಲ್ಲಿಸುವ ಕೊನೆಯ ದಿನಾಂಕವನ್ನು 27-12-2021 ರವರೆಗೆ ಹಾಗೂ ದಂಡ ಶುಲ್ಕವಾಗಿ ದಿನಾಂಕ 28-12-2021 ರಿಂದ 31-12-2021 ರವರೆಗೆ ನಿಗಧಿಗೊಳಿಸಲಾಗಿತ್ತು.

**ಮುಂದುವರೆದು, 2021-22 ನೇ ಸಾಲಿನ ಶೈಕ್ಷಣಿಕ ವರ್ಷಕ್ಕೆ ಡಿಪ್ಲೋಮಾ ಇನ್ ನರ್ಸಿಂಗ್ ಕೋರ್ಸ್‌ಗೆ ಸರ್ಕಾರಿ ಸೀಟುಗಳು ಮತ್ತು ಖಾಸಗಿ ಶುಶ್ರೂಷಾ ಶಾಲೆಗಳಲ್ಲಿನ ಶೇಕಡಾ 10 ರಷ್ಟು ಸರ್ಕಾರಿ ಕೋಟಾದ ಸೀಟುಗಳಿಗೆ ಅಭ್ಯರ್ಥಿಗಳನ್ನು ಆಯ್ಕೆ ಮಾಡಲು ದಿನಾಂಕ 24-12-2021 ರಂದು Mopup round ಕೌನ್ಸಿಲಿಂಗ್ ನಡೆಯುತ್ತಿರುವುದರಿಂದ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಮೊದಲನೇ ಹಾಗೂ ಎರಡನೇ ವರ್ಷದ ವಾರ್ಷಿಕ ಪರೀಕ್ಷೆಯ ಪರೀಕ್ಷಾ ಅರ್ಜಿಗಳನ್ನು ಆನ್‌ಲೈನ್ ಮೂಲಕ ಸಲ್ಲಿಸಲು ಕೊನೆಯ ದಿನಾಂಕವಾದ 27-12-2021 ಅನ್ನು ಮುಂದೂಡಲಾಗಿ ಕೊನೆಯ ದಿನಾಂಕವನ್ನು 04-01-2022 ರವರೆಗೆ ವಿಸ್ತರಿಸಲಾಗಿದೆ ಹಾಗೂ ದಂಡಶುಲ್ಕವಾಗಿ ಪ್ರತಿ ವಿದ್ಯಾರ್ಥಿಗೆ ಪ್ರತಿ ದಿನಕ್ಕೆ ರೂ.15/- ರಂತೆ ದಿನಾಂಕ 05-01-2022 ರಿಂದ 10-01-2022 ರವರೆಗೆ ವಿಸ್ತರಿಸಲಾಗಿದೆ.**

ವಿಶೇಷಾಧಿಕಾರಿಗಳು
ಕರ್ನಾಟಕ ಶುಶ್ರೂಷಾ ಮತ್ತು ಅರೆ ವೈದ್ಯಕೀಯ
ವಿಜ್ಞಾನಗಳ ಶಿಕ್ಷಣ (ನಿಯಂತ್ರಣ) ಪ್ರಾಧಿಕಾರ
ಬೆಂಗಳೂರು.

24/12/21
ಕಾರ್ಯದರ್ಶಿಗಳು
ಕ.ರಾ.ಶು.ಪ.ಮಂ, ಬೆಂಗಳೂರು.
24/12/2021

ಪ್ರತಿಯನ್ನು ಶ್ರೀ ಯಶವಂತ್ ಬಿ.ಎನ್. ಕಂಪ್ಯೂಟರ್ ಆಪರೇಟರ್‌ರವರ ಮಾಹಿತಿಗಾಗಿ ಹಾಗೂ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ಹಾಗೂ ಇ-ಮೇಲ್ ಮುಖಾಂತರ ಎಲ್ಲಾ ಶುಶ್ರೂಷಾ ಶಾಲೆಗಳಿಗೆ ಕಳುಹಿಸಲು ಸೂಚಿಸಲಾಗಿದೆ.